# ಸಂಸಾರಿ ಸಂನ್ಯಾಸಿ ಶ್ರೀರಾಮಕೃಷ್ಣರು

ಡಿ.ಕೆ. ಈರೇಗೌಡ

ಶ್ರೀರಾಮಕೃಷ್ಣರು ಸಂಸಾರಿ ಮತ್ತು ಸಂನ್ಯಾಸಿಗಳಾಗಿ ವಿಶಿಷ್ಟ ರೀತಿಯಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸಿದುದನ್ನು ಈ ಕಿರುಲೇಖನದಲ್ಲಿ ನಿರೂಪಿಸಲಾಗಿದೆ. ಡಿ.ಕೆ. ಈರೇಗೌಡರು ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗದ ಉಪನಿರ್ದೇಶಕರಾಗಿದ್ದು ಈಗ ನಿವೃತ್ತ ಜೀವನ ನಡೆಸುತ್ತಿದ್ದಾರೆ.

ಶ್ರೀರಾಮಕೃಷ್ಣರು ದಕ್ಷಿಣೇಶ್ವರದಲ್ಲಿದ್ದಾಗ ಒಮ್ಮೆ ಅವರಿಗೆ ವಿಪರೀತ ಹಸಿವಾಗುತ್ತದೆ. ಅನತಿ ದೂರದಲ್ಲಿದ್ದ ಶ್ರೀಶಾರದಾ ದೇವಿಯವರ ಕೊಠಡಿಗೆ ಹೋಗಿ, ತಿನ್ನಲು ಏನಾದರೂ ಇದ್ದರೆ ಕೊಡಬೇಕೆಂದು ಕೇಳುತ್ತಾರೆ. ಶ್ರೀಮಾತೆಯವರು ಕೆಲವು ಸಿಹಿ ತಿನಿಸುಗಳನ್ನು ನೀಡುತ್ತಾರೆ. ಅವುಗಳನ್ನು ತಿಂದನಂತರ ತಮ್ಮ ಬಳಿಯಲ್ಲಿ ಮಿಕ್ಕಿದ್ದ ಇನ್ನೂ ಕೆಲವು ಚೂರುಗಳನ್ನು ತಮ್ಮ ಕೊಠಡಿಗೆ ತೆಗೆದುಕೊಂಡು ಹೋಗಬೇಕೆಂದೂ, ಮುಂದೆ ತಮಗೆ ಹಸಿವಾದಾಗ ಬೇಕಾಗುತ್ತವೆಯೆಂದೂ ಶ್ರೀಮಾತೆಯವರು ಹೇಳುತ್ತಾರೆ. ಈ ಮಾತುಗಳನ್ನು ಕೇಳಿದ ತಕ್ಷಣ ಶ್ರೀರಾಮಕೃಷ್ಣರು ಬರಸಿಡಿಲು ಬಡಿದವರಂತೆ ದಿಗ್ಭ್ರಮೆಗೊಂಡು ಗಂಗಾನದಿಯತ್ತ ಧಾವಿಸುತ್ತಾರೆ, ಪ್ರಾಣವನ್ನೇ ತ್ಯಜಿಸಲು. ಗಾಬರಿಗೊಂಡ ಶಾರದಾದೇವಿಯವರು ಹೃದಯನಿಗಾಗಿ ಕೂಗಿಕೊಳ್ಳುತ್ತಾರೆ. ಹೃದಯನು ಓಡಿಬಂದು ಶ್ರೀರಾಮಕೃಷ್ಣರನ್ನು ಹಿಡಿದುಕೊಂಡು ಅವರ ಕೊಠಡಿಯತ್ತ ಕರೆತರುತ್ತಾನೆ.

ಶ್ರೀರಾಮಕೃಷ್ಣರು ದಕ್ಷಿಣೇಶ್ವರದ ಕಾಳಿದೇವಾಲಯದ ಪೂಜಾರಿಯಾಗಿ ನೇಮಕಗೊಂಡಿದ್ದು ಸರಿಯಷ್ಟೆ. ಅವರಿಗೆ ಈ ಸಂಬಂಧವಾಗಿ ತಿಂಗಳಿಗೆ ಏಳು ರೂಪಾಯಿ ಸಂಬಳ ಬರುತ್ತಿತ್ತಷ್ಟೆ. ಅದನ್ನು ಹೃದಯನ ಮೂಲಕ ಒಂದು ಗುಡಾಣದಲ್ಲಿ ಸಂಗ್ರಹಿಸಿಡುತ್ತಿದ್ದರು. ಒಮ್ಮೆ ಹೃದಯನನ್ನು ಕರೆದು ಅದರಲ್ಲಿ ಎಷ್ಟು ಹಣ ಸಂಗ್ರಹವಾಗಿದೆ ನೋಡು ಎಂದು ಕೇಳುತ್ತಾರೆ. ಹೃದಯನು ಮುನ್ನೂರು ರೂಗಳು ಸಂಗ್ರಹವಾಗಿರುವುದಾಗಿ ತಿಳಿಸುತ್ತಾನೆ. ಆ ಹಣದಿಂದ ಶ್ರೀಮಾತೆಯವರಿಗೆ ಎರಡು ಚಿನ್ನದ ಬಳೆಗಳನ್ನು ಮಾಡಿಸಿ ಕೊಡುತ್ತಾರೆ.

ಮುಂದೊಂದು ದಿನ ಶ್ರೀಮಾತೆಯವರನ್ನು "ನೀವು ಎಷ್ಟು ಚಪಾತಿ ತಿನ್ನುತ್ತೀರಿ?" ಎಂದು ಕೇಳುತ್ತಾರೆ. ಎಂತಹ ವಿಚಿತ್ರ ಪ್ರಶ್ನೆ! ಸಹಜವಾಗಿಯೇ ಲಜ್ಜಾವರಣರಾಗಿದ್ದ ಮಾತೆಯವರು ಮತ್ತಷ್ಟು ನಾಚಿ ಮುದುಡುತ್ತಾರೆ. ಆದರೆ ಈ ವಿಚಿತ್ರ ಸ್ವರೂಪದ ಗಂಡ ಬಿಡಬೇಕಲ್ಲ. ಮತ್ತೂ ಒತ್ತಾಯಿಸುತ್ತಾರೆ. ಅವರ ಒತ್ತಾಯ ತಾಳಲಾರದೆ "ಐದು" ಚಪಾತಿ ತಿನ್ನುತ್ತೇನೆ ಎಂದು ಹೇಳುತ್ತಾರೆ. ಹಾಗಿದ್ದರೆ "ಬೆಳಗ್ಗೆ ಐದು" "ಸಂಜೆ ಐದು" ಎಂದು ಲೆಕ್ಕ ಹಾಕಿದ ಶ್ರೀರಾಮಕೃಷ್ಣರು ಮುಂದೆ ತಾವು ದೇಹವಳಿದ ಬಳಿಕ ಶ್ರೀಮಾತೆಯವರ ಪೋಷಣೆಗೆ ಬೇಕಾಗುವಷ್ಟು ಹಣವನ್ನು ಬಲರಾಮಬೋಸ್‌ನಲ್ಲಿ "ಇಡುಗಂಟಾಗಿ" ಇಡುತ್ತಾರೆ.

ಸಂಗ್ರಹ ಮಾಡುವುದಿರಲಿ "ಒಂದಿಷ್ಟು ಸಿಹಿತಿನಿಸುಗಳನ್ನು ಇಟ್ಟುಕೊಳ್ಳಿ" ಎಂಬ ಶಬ್ದ ಕಿವಿ ತಾಕಿದೊಡನೆಯೇ ದೇಹವನ್ನೇ ತ್ಯಜಿಸಲು ನಿರ್ಧರಿಸುವ ಈ ಸಂತಶ್ರೇಷ್ಠರು ಹಣವನ್ನು ಸಂಗ್ರಹಿಸಿದ್ದಾದರೂ ಹೇಗೆ? ಸಂಗ್ರಹಿಸಿದ ಹಣವನ್ನು ಬಲರಾಮ ಬೋಸ್‌ನಲ್ಲಿ "ಇಡುಗಂಟಾಗಿ" ಇಟ್ಟಿದ್ದಾದರೂ ಹೇಗೆ? "ಹೊನ್ನು-ಮಣ್ಣು" ಎರಡು ಒಂದೇ ಎಂದು "ಗಂಗೆಗೆ" ಚೆಲ್ಲುತ್ತಿದ್ದ ಈ ಪರಮವೈರಾಗಿ ಹೆಂಡತಿಗಾಗಿ ಚಿನ್ನದ ಬಳೆಗಳನ್ನು ಮಾಡಿಸಿದ್ದಾದರೂ ಹೇಗೆ? ಹಾಗಿದ್ದರೆ ಶ್ರೀರಾಮಕೃಷ್ಣರಲ್ಲಿ ದ್ವಂದ್ವವಿತ್ತೆ? ನಡೆನುಡಿಯಲ್ಲಿ ಭಿನ್ನತೆಯಿತ್ತೆ? ಅವರ ಆಚಾರಗಳಲ್ಲಿ ಡಾಂಭಿಕತೆ ಇತ್ತೆ? ಇತ್ಯಾದಿ ...ಇತ್ಯಾದಿ ಪ್ರಶ್ನೆಗಳ ಸರಮಾಲೆಗಳೇ ಮೇಲೇಳುತ್ತವೆ.

ಶ್ರೀರಾಮಕೃಷ್ಣರು ಸಂನ್ಯಾಸಿಯೂ ಹೌದು, ಸಂಸಾರಿಯೂ ಹೌದು. ಮದುವೆಯಾಗಿದ್ದೂ ಸಂನ್ಯಾಸಿ, ಸಂನ್ಯಾಸಿಯಾಗಿದ್ದೂ ಸಂಸಾರಿ. ಸಂನ್ಯಾಸಿ ಎಂದೂ ಸಂಗ್ರಹಿಸಕೂಡದು. ಅಂದಂದಿನ ಜೀವನಯಾಪನೆ ಅಂದಂದೇ ನಡೆಯಬೇಕು. ಅವನು ಸಂಜೆಗೆಂತು, ನಾಳೆಗೆಂತು—ಎಂದು ಚಿಂತಿಸಬಾರದು. ಭಗವಂತನನ್ನೇ ನೆರೆ ನಂಬಬೇಕು. ಭಗವಂತನಲ್ಲಿ ಸಂಪೂರ್ಣ ಶರಣಾಗಬೇಕು. ಬೆಕ್ಕಿನ ಮರಿಯಂತೆ "ಮೀಯಾಂ" "ಮೀಯಾಂ" ಎನ್ನುವುದಷ್ಟೇ ಅವನ ಕೆಲಸ. ಹಸಿವು ತೃಷ್ಣೆಗಳು ಅವನ ಅಧೀನವಲ್ಲ. ದೇವರು ಹೇಗಿಟ್ಟಿರುತ್ತಾನೊ ಹಾಗಿರಬೇಕು. ಇದು ಸಂನ್ಯಾಸಿಯ ಆದರ್ಶ ಸ್ಥಿತಿ. ಶ್ರೀರಾಮಕೃಷ್ಣರು ಸಂನ್ಯಾಸಿಯಾಗಿ ಈ ಉನ್ನತ ಸ್ಥಿತಿಯನ್ನು ಸಾಧಿಸಿ ತೋರಿಸಿದ್ದಾರೆ. ಅವರೆಂದೂ ಏನನ್ನೂ ಸಂಗ್ರಹಿಸಲಿಲ್ಲ. ಸಂಗ್ರಹಿಸುವುದಿರಲಿ ಸಂಗ್ರಹಭಾವನೆಯೂ ಅವರ ಮನಸ್ಸಿನಲ್ಲಿ ಎಂದೂ ಸುಳಿಯಲಿಲ್ಲ. ಸಂಗ್ರಹಶಬ್ದ ಕಿವಿಗೆ ಬಿದ್ದೊಡನೆಯೇ ಶರೀರವನ್ನೇ ತ್ಯಜಿಸುವ ಕಠಿಣಕ್ರಮಕ್ಕೆ ಉದ್ಯುಕ್ತರಾಗುತ್ತಾರೆ. ಸಂನ್ಯಾಸಧರ್ಮದ ಉನ್ನತಮೌಲ್ಯಗಳನ್ನು ಈ ಜಗತ್ತಿನ ಮುಂದಿಟ್ಟಿದ್ದಾರೆ.

ಆದರೆ ಶ್ರೀರಾಮಕೃಷ್ಣರು ಸಂಸಾರಿಯೂ ಹೌದು. ಸಂಸಾರಿಯಾಗಿ ಅವರೆಂದೂ ಗೃಹಸ್ಥಜೀವನದ ನೀತಿನಿಯಮಗಳನ್ನು ಮೀರಲಿಲ್ಲ. ಜವಾಬ್ದಾರಿಗಳನ್ನು ಮರೆಯಲಿಲ್ಲ. ಚಿಕ್ಕಂದಿನಿಂದಲೇ ಶಾರದಾದೇವಿಯವರಿಗೆ ಸಾಂಸಾರಿಕ ಜೀವನದ ಬಗ್ಗೆ ತರಬೇತಿ ನೀಡುತ್ತಾರೆ. ಅತ್ಯಂತ ಸಣ್ಣ ಪುಟ್ಟ ವಿಚಾರಗಳ ಬಗ್ಗೆಯೂ ಅವರಿಗೆ ತಿಳುವಳಿಕೆ ನೀಡುತ್ತಾರೆ. ಅಷ್ಟೇ ಏಕೆ, ತಾವು ಬಯಸುವುದಾದರೆ ಸಾಮಾನ್ಯರಂತೆ "ಸಾಂಸಾರಿಕ" ಜೀವನ ನಡೆ

ಸಲೂ ಸಿದ್ಧವೆನ್ನುತ್ತಾರೆ. "ಹೆಣ್ಣು ಮಾಯೆಯಲ್ಲ. ಮನದೊಳಗಣ ಮೋಹವೇ ಮಾಯೆ" ಎಂಬುದನ್ನು ಸಾಧಿಸಿತೋರಿಸಿದ್ದಾರೆ. ಬುದ್ಧ ಕೂಡ ಮಡದಿಯ ಮೋಹ ತನ್ನನ್ನು ಬಂಧಿಸಬಹುದೆಂದು ಬಗೆದು ನವಜಾತ ಶಿಶುವಿನೊಡನಿದ್ದ ಸತಿಗೆ ತಿಳಿಸದೆಯೆ ನಡುರಾತ್ರಿಯಲ್ಲಿ ಹೊರಟು ಹೋಗುತ್ತಾನೆ. ಆದರೆ ಶ್ರೀರಾಮಕೃಷ್ಣರು ಸಂನ್ಯಾಸ ಜೀವನಕ್ಕೆ "ಸತಿಯ" ಅಪ್ಪಣೆ ಬೇಡುತ್ತಾರೆ! ಅವರ ಜೀವನ ನಿರ್ವಹಣೆಯ ಹೊಣೆ ಹೊರುತ್ತಾರೆ. ಚಿನ್ನದ ಬಳೆ ತೊಡಿಸುತ್ತಾರೆ. ತಮ್ಮ ಆಧ್ಯಾತ್ಮಿಕ ಜೀವನದ ಉನ್ಮಾದ ಅವಸ್ಥೆಯಲ್ಲಿ ಬೃಂದಾವನದಲ್ಲೇ ಉಳಿಯಲೆಳಸಿದ್ದ ರಾಮಕೃಷ್ಣರು ತಾಯ ನೆನಪಾದೊಡನೆಯೆ ದಕ್ಷಿಣೇಶ್ವರಕ್ಕೆ ಓಡುತ್ತಾರೆ. ತಾಯ ಸಂರಕ್ಷಣೆಯ ಕರ್ತವ್ಯ ಮರೆಯಲಿಲ್ಲ. ತಮ್ಮ ಬಳಿಗೆ ಬರುತ್ತಿದ್ದ ಗೃಹಸ್ಥ ಭಕ್ತರಿಗೆ, ಆದರ್ಶಗೃಹಸ್ಥ ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ ತಿಳಿಹೇಳುತ್ತಾರೆ.

ಹೀಗೆ ಸಂನ್ಯಾಸಜೀವನದ ಆದರ್ಶಗಳನ್ನೂ ಸಾಂಸಾರಿಕ ಜೀವನದ ಆದರ್ಶವನ್ನೂ ಎತ್ತಿಹಿಡಿಯುವುದರ ಮೂಲಕ "ಸಂನ್ಯಾಸ" "ಸಂಸಾರ" ಎರಡರ "ಸಮನ್ವಯ"ವನ್ನು ಸಾಧಿಸಿ ತೋರಿಸಿದ್ದಾರೆ. ಈ ಎರಡು ಬದುಕಿನ ಮೂಲಕವೂ ಭಗವಂತನನ್ನು ಪಡೆಯಬಹುದೆಂಬುದನ್ನು ಈ ಜಗತ್ತಿಗೆ ಸಾರಿದ್ದಾರೆ. ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರನ್ನು "ಅವತಾರವರಿಷ್ಠಾಯ" ಎಂದು ಕರೆದಿದ್ದಾರೆ. ಆ ಮಾತು "ಧ್ವನಿ"ಪೂರ್ಣವಾಗಿದೆಯಲ್ಲವೆ?

❋

# ಪ್ರಹಸನ ಪ್ರಸಂಗ

ನಾವು ನಮ್ಮ ಕೋಪ, ದ್ವೇಷ, ವ್ಯಾಮೋಹ ಮುಂತಾದ ಭಾವೋದ್ವೇಗಗಳಿಗೆ ವಶರಾದಾಗ ನಮ್ಮ ಆಲೋಚನಾ ಶಕ್ತಿಯನ್ನು ಕಳೆದುಕೊಳ್ಳುತ್ತೇವೆ, ನಮ್ಮ ನಿರ್ಣಯ ಸಾಮರ್ಥ್ಯ ಕುಂಠಿತವಾಗುತ್ತದೆ. ಆಗ ಮಾಡಬಾರದುದನ್ನು ಮಾಡಿ ಅನಂತರ ಪರಿತಪಿಸುತ್ತೇವೆ.

ಒಬ್ಬ ಕೈಗಾರಿಕೋದ್ಯಮಿಯು ಮುನ್ಸೂಚನೆಯಿಲ್ಲದೆ ತನ್ನ ಕಾರ್ಖಾನೆಗೆ ಭೇಟಿ ನೀಡುತ್ತಾನೆ—ಅಲ್ಲಿ ಕೆಲಸ ಹೇಗೆ ನಡೆಯುತ್ತಿದೆ ಎಂದು ಪರೀಕ್ಷಿಸಲು. ಅವನು ಕೋಠಿಯಲ್ಲಿ ಓಡಾಡುತ್ತಿರುವಾಗ ಒಬ್ಬ ಯುವಕನು ಸೋಮಾರಿಯಂತೆ ಏನೂ ಕೆಲಸವಿಲ್ಲದೆ ಗೋಡೆಗೆ ಒರಗಿಕೊಂಡು ನಿಂತಿರುವುದನ್ನು ಕಂಡನು. ಕೈಗಾರಿಕೋದ್ಯಮಿಗೆ ತುಂಬ ಕೋಪ ಬಂತು. "ನಿನಗೆಷ್ಟೊ ಸಂಬಳ?" ಎಂದು ಜೋರಾಗಿ ಕೇಳಿದನು.

ಆ ಯುವಕ ಹೇಳಿದ, "ಒಂದು ವಾರಕ್ಕೆ ಒಂದು ಸಾವಿರ ರೂಪಾಯಿ" ಎಂದು.

ಕೈಗಾರಿಕೋದ್ಯಮಿ ತನ್ನ ಜೇಬಿನಿಂದ ಪರ್ಸನ್ನು ಹೊರಕ್ಕೆ ತೆಗೆದು ಅದರಿಂದ ಒಂದು ಸಾವಿರ ರೂಪಾಯಿಗಳನ್ನು ಎಣಿಸಿ ಆ ಯುವಕನಿಗೆ ಕೊಟ್ಟು ಹೇಳಿದ, "ತಗೊ, ಒಂದು ವಾರದ ಸಂಬಳ ಇಲ್ಲಿದೆ. ಇದನ್ನು ತಗೊಂಡು ಹೊರಟುಹೋಗು. ಇನ್ನೆಂದೂ ಈ ಕಡೆ ಮುಖ ತೋರಿಸಬೇಡ," ಎಂದು ಗುಡುಗಿದ.

ಆ ಯುವಕನು ಬಾಯಿ ಪಿಟಕ್ಕೆನ್ನದೆ ನೋಟುಗಳನ್ನು ಜೇಬಿಗೆ ಹಾಕಿಕೊಂಡು ಹೊರಟೇಹೋದ.

ಕೋಠಿಯ ನಿರ್ವಾಹಕನು ಸ್ವಲ್ಪ ದೂರದಲ್ಲಿ ನಿಂತು ಇದನ್ನು ನೋಡುತ್ತಿದ್ದನು. ಅವನಿಗೆ ಅತ್ಯಾಶ್ಚರ್ಯವಾಯಿತು. ಕೈಗಾರಿಕೋದ್ಯಮಿ ಅವನ ಹತ್ತಿರ ಹೋಗಿ, "ಈ ಆಸಾಮಿ ಯಾವಾಗಿನಿಂದ ಇಲ್ಲಿ ಕೆಲಸ ಮಾಡುತ್ತಿದ್ದಾನೆ?" ಎಂದು ವಿಚಾರಿಸಿದ.

"ಅವನು ಇಲ್ಲಿಯ ಕೆಲಸಗಾರನೇ ಅಲ್ಲ. ಅವನು ಒಂದು ಪ್ಯಾಕೆಟ್ಟನ್ನು ಕೊಡುವುದಕ್ಕೆ ಬಂದಿದ್ದ ಅಷ್ಟೆ."

❋❋❋❋

ಹಣದ ವ್ಯಾಮೋಹ ಮನುಷ್ಯನನ್ನು ಎಲ್ಲ ನೈತಿಕ ಪ್ರಜ್ಞೆಯಿಂದಲೂ ಮಾನವೀಯ ಕಳಕಳಿಯಿಂದಲೂ ದೂರವಾಗಿಸುತ್ತದೆ. ವ್ಯವಹಾರ ಕುಶಲತೆಯ ಮುಸುಕಿನಲ್ಲಿ ತನ್ನ ಧನ ಸಂಗ್ರಹದ ವ್ಯಾಮೋಹವನ್ನು ಅವನು ಪೋಷಿಸುತ್ತಾನೆ. ಕೆಲವೊಮ್ಮೆ ಇದನ್ನು ಒಂದು ಸಂಸ್ಥೆಯ ಒಳಿತಿಗಾಗಿ ಮಾಡುತ್ತಿರುವುದು ಎಂದು ಅವನು ಅದನ್ನು ಸಮರ್ಥಿಸಬಹುದು. ಅಂದರೆ ಆಗ ಸಂಸ್ಥೆಯ ಹೆಸರಿನಲ್ಲಿ ತನ್ನ ವ್ಯಾಮೋಹವನ್ನು ಪೋಷಿಸುತ್ತಾನೆ.

ಒಬ್ಬ ಜಮೀನುದಾರನಿದ್ದ. ಅವನಿಗೆ ನೂರಾರು ಎಕರೆ ಹೊಲ ಇತ್ತು. ಅದರಲ್ಲಿ ಸ್ವಲ್ಪ ಭಾಗವನ್ನು ಬೇರೆಯವರಿಗೆ ಮಾರಿದನು. ಮಾರಾಟದ ಲೆಕ್ಕ ಪತ್ರಗಳೆಲ್ಲ ಮುಗಿದಮೇಲೆ ಅವನ ಮಾರಾಟಗಾರನಿಗೆ (salesman) ತಿಳಿದು ಬಂತು ಮಾರಿದ ಜಾಗ ಸಂಪೂರ್ಣ ನೀರಿನಿಂದ ಆವೃತವಾಗಿದೆ ಎಂದು.

ಈಗೇನು ಮಾಡುವುದು? ಅದನ್ನು ಕೊಂಡುಕೊಂಡವನು ಕೋಪೋದ್ರಿಕ್ತನಾಗಿ ಹಿಂತಿರುಗಿ ಬರುವುದು ನಿಶ್ಚಯ. ಮಾರಾಟಗಾರ ಜಮೀನುದಾರನಿಗೆ ಹೇಳಿದ, "ಈಗ ಏನು ಮಾಡುವುದು? ಅವನು ಬಂದಾಗ ಅವನಿಗೆ ಹಣವನ್ನು ಹಿಂತಿರುಗಿಸಿಬಿಡುವುದೆ?"

"ಏನು, ಹಣ ಹಿಂತಿರುಗಿಸುವುದೆ? ನೀನೆಂಥ ಮಾರಾಟಗಾರ? ಅವನಿಗೆ ಒಂದು ಮನೆದೋಣಿ(houseboat)ಯನ್ನು ಮಾರಿದರಾಯಿತು," ಎಂದನಾ ಜಮೀನುದಾರ.

❋

ಸ್ವಯಿದಾನ: ಪಾಪ್ಯುಲರ್ ಎಂಟರ್‌ಪ್ರೈಸಸ್, ಬೆಂಗಳೂರು